# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1987 (1687) |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಎಫ್. ಹೆಚ್. ಜಕ್ಕಪ್ಪನವರ್<br>(ನಾಮನಿರ್ದೇಶನ ಹೊಂದಿದವರು) |
| ಉತ್ತರಿಸುವ ದಿನಾಂಕ | : | 24.03.2026 |
| ಉತ್ತರಿಸುವ ಸಚಿವರು | : | ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು |

| ಕ್ರ. ಸಂ. | ಪ್ರಶ್ನೆಗಳು | ಉತ್ತರ |
|---|---|---|
| ಅ. | ಹುಬ್ಬಳ್ಳಿ-ಧಾರವಾಡದ ನವೀನ್ ಹೋಟೆಲ್ ಗಾಲ್ಫ್ ಕ್ಲಬ್ ಗೆ ಮಂಜೂರಾದ ಜಮೀನು "ಹಸಿರು ವಲಯ" (Green Zone) ಎಂದು ಸರ್ಕಾರ ತಿಳಿಸಿದ್ದು, ಆದರೆ ದಿನಾಂಕ:08.08.2024ರ ಮೂಲ ಖರೀದಿ ಪತ್ರದಲ್ಲಿ ಇಂತಹ ಯಾವುದೇ ಷರತ್ತಿನ ಉಲ್ಲೇಖವಿಲ್ಲದಿರಲು ಕಾರಣವೇನು; | ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ಮೆ: ನವೀನ್ ಹೋಟೆಲ್ಸ್ ಲಿಮಿಟೆಡ್ ರವರಿಗೆ ಧಾರವಾಡ ಜಿಲ್ಲೆ, ಹುಬ್ಬಳ್ಳಿ ತಾಲ್ಲೂಕಿನ ಭೈರದೇವರ ಕೊಪ್ಪ ಹಾಗೂ ಉಣಕಲ್ ಗ್ರಾಮದ ವಿವಿಧ ಸರ್ವೆ ನಂಬರ್ ಗಳಲ್ಲಿ ಒಟ್ಟು 114 ಎಕರೆ 17 ಗುಂಟೆ ಜಮೀನನ್ನು ಹಂಚಿಕೆ ಮಾಡಿ ದಿನಾಂಕ:05-03-1999, ದಿನಾಂಕ:10-03-2000, ದಿನಾಂಕ:16-03-2002 & ದಿನಾಂಕ:18-12-2002 ವಿವಿಧ ದಿನಾಂಕಗಳಂದು ಸ್ವಾಧೀನ ಪತ್ರಗಳನ್ನು ನೀಡಿ, ದಿನಾಂಕ:16-04-2002 & 23-12-2002 ರಂದು 21 ವರ್ಷ ಅವಧಿಗೆ ಗುತ್ತಿಗೆ ಮತ್ತು ಮಾರಾಟ ಕರಾರು ಪತ್ರ ನೆರವೇರಿಸಲಾಗಿದೆ.<br><br>ಮೆ: ನವೀನ್ ಹೋಟೆಲ್ಸ್ ಲಿಮಿಟೆಡ್ ರವರು ತಮಗೆ ಹಂಚಿಕೆಯಾದ 114 ಎಕರೆ 17 ಗುಂಟೆ ಜಮೀನಿನಲ್ಲಿ ಮಂಡಳಿಯ ಹಂಚಿಕೆ ಮತ್ತು ಗುತ್ತಿಗೆ & ಮಾರಾಟ ಕರಾರು ಷರತ್ತುಗಳನ್ವಯ Golf Club ಮತ್ತು Golf Course ಗಳನ್ನು ಸ್ಥಾಪನೆ ಮಾಡಿದ್ದು, Golf Club ಚಟುವಟಿಕೆ ನಡೆಸುತ್ತಿರುತ್ತಾರೆ ಹಾಗೂ ದಿನಾಂಕ: 05-08-2024 ರಂದು ಶುದ್ಧ ಕ್ರಯ ಪತ್ರ ನೆರವೇರಿಸಲಾಗಿದೆ.<br><br>ಮುಂದುವರೆದು, ಸದರಿ ಜಮೀನು ಹಂಚಿಕೆ ಮಾಡುವ ಮುನ್ನ ದಿನಾಂಕ:17-10-1994 ರಂದು ಮಂಡಳಿಯಿಂದ ಮೆ: ನವೀನ್ ಹೋಟೆಲ್ಸ್ ಲಿಮಿಟೆಡ್ ರವರಿಗೆ ಭೂಸ್ವಾಧೀನಪಡಿಸಲು ಉದ್ದೇಶಿಸಿರುವ ಜಮೀನಿನಲ್ಲಿ "Golf Course" ಉದ್ದೇಶಕ್ಕೆ ಮಾತ್ರ ಬಳಸಬೇಕು, ಹಸಿರು ವಲಯವೆಂದು ನಿರ್ವಹಿಸಬೇಕು, ಕಟ್ಟಡ ಕಾಮಗಾರಿ ನಡೆಸಬಾರದೆಂದು ಷರತ್ತು ವಿಧಿಸಲಾಗಿರುತ್ತದೆ.<br><br>ಕಂಪನಿಯವರು ದಿನಾಂಕ:12-11-1994ರ ತಮ್ಮ ಪತ್ರದಲ್ಲಿ ಈ ಷರತ್ತನ್ನು ಒಪ್ಪಿಕೊಂಡ ಮೇಲೆ ಸದರಿ ಜಮೀನನ್ನು ಹಂಚಿಕೆ ಮಾಡಲಾಗಿರುತ್ತದೆ.<br>ಅದರಂತೆ, Golf Course ಮತ್ತು Golf Club ಯೋಜನೆಗೆ ಸಂಬಂಧಿಸಿದ ಚಟುವಟಿಕೆಗಳನ್ನು ನಡೆಸುತ್ತಿರುವುದರಿಂದ ಶುದ್ಧ ಕ್ರಯಪತ್ರ ನೆರವೇರಿಸಲಾಗಿದೆ. |

| | | |
|---|---|---|
| ಆ. | ಸರ್ಕಾರದ ಉತ್ತರಕ್ಕೂ ಮತ್ತು ಸಬ್-ರಿಜಿಸ್ಟ್ರಾರ್ ಕಛೇರಿಯ ಖರೀದಿ ದಾಖಲೆಗಳಿಗೂ ಇರುವ ಈ ಗಂಭೀರ ವ್ಯತ್ಯಾಸಕ್ಕೆ ಹೊಣೆಗಾರರು ಯಾರು; ಇಲಾಖೆಯು ತಪ್ಪು ಮಾಹಿತಿ ನೀಡಿದೆಯೇ: | ಮಂಡಳಿಯ ನಿಯಮಗಳನ್ವಯ ಏಕ ಘಟಕ ಸಂಕೀರ್ಣ ಯೋಜನೆಯಡಿ ಹಂಚಿಕೆಯಾದ ಜಮೀನಿಗೆ ಪಾವತಿಸಿಕೊಳ್ಳಲಾದ ಮೊತ್ತವನ್ನು (ಭೂಪರಿಹಾರ + ಮಂಡಳಿಯ ಸೇವಾ ಶುಲ್ಕ) ನಮೂದಿಸಿ ಗುತ್ತಿಗೆ ಮತ್ತು ಮಾರಾಟ ಕರಾರು ಪತ್ರ ನೆರವೇರಿಸಲಾಗುತ್ತದೆ. |
| ಇ. | 114 ಎಕರೆ 17 ಗುಂಟೆ ಜಮೀನನ್ನು ಅಂದಿನ ಮಾರುಕಟ್ಟೆ ಮೌಲ್ಯಕ್ಕೆ ನೋಂದಾಯಿಸದೆ ಕೇವಲ ರೂ.97,61,443 ಕ್ಕೆ ನೋಂದಣಿ ಮಾಡಿದ್ದರಿಂದ, ಸರ್ಕಾರಕ್ಕೆ ಬರಬೇಕಿದ್ದ ಸುಮಾರು ರೂ.150 ಕೋಟಿ ಮುದ್ರಾಂಕ ಮತ್ತು ನೋಂದಣಿ ಶುಲ್ಕ ವಂಚನೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ನಂತರ ಭೂಪರಿಹಾರ ಹೆಚ್ಚಿಗೆ ಪಾವತಿಸದಿದ್ದಲ್ಲಿ, ಹಂಚಿಕೆ ದರವನ್ನು ಶುದ್ಧ ಕ್ರಯ ಪತ್ರ ಸಮಯದಲ್ಲಿ ನಮೂದಿಸಿ ಕ್ರಯವನ್ನು ನೆರವೇರಿಸಲಾಗುತ್ತದೆ. ಸದರಿ ಮೊತ್ತಕ್ಕೆ ಹಂಚಿಕೆದಾರರು ಮುದ್ರಾಂಕ ಶುಲ್ಕ ಮತ್ತು ನೋಂದಣಿ ಶುಲ್ಕಗಳನ್ನು ಪಾವತಿಸಿ ನೋಂದಣಿ ಮಾಡಿಕೊಳ್ಳುತ್ತಾರೆ.<br><br>ಶುದ್ಧ ಕ್ರಯ ಪತ್ರ ನೆರವೇರಿಸುವ ಸಮಯದ ಮಾರುಕಟ್ಟೆ ಬೆಲೆ ಅಥವಾ ಉಪನೊಂದಣಾಧಿಕಾರಿಗಳ ಮಾರ್ಗಸೂಚಿ ದರವನ್ನು ಮಂಡಳಿಯು ಪಡೆಯುವುದಿಲ್ಲ.<br><br>ಸದರಿ ಕಂಪನಿಗೆ ಏಕ ಘಟಕ ಸಂಕೀರ್ಣದಡಿ ಜಮೀನು ಹಂಚಿಕೆಯಾಗಿರುವುದರಿಂದ, ನೆರವೇರಿಸಿರುವ ಶುದ್ಧ ಕ್ರಯ ಪತ್ರದಲ್ಲಿ ಮಂಡಳಿಗೆ ಹಂಚಿಕೆ ಸಮಯದಲ್ಲಿ ಪಾವತಿಸಿರುವ ಭೂಪರಿಹಾರದ ಮೊತ್ತ ಮತ್ತು ಮಂಡಳಿ ಸೇವಾ ಶುಲ್ಕದ ಮೊತ್ತವನ್ನು ಜಮೀನಿನ ಭೂ ಮೌಲ್ಯವೆಂದು ನಮೂದಿಸಲಾಗಿರುತ್ತದೆ. |
| ಈ. | ಮೂರು ದಶಕಗಳಿಂದಲೂ ಉದ್ದೇಶಿತ ಬಳಕೆಗೆ ಬಳಕೆಯಾಗದೆ, ಉಳಿದಿರುವ ಈ ಜಮೀನನ್ನು ಸರ್ಕಾರ ಕೂಡಲೇ ವಾಪಸ್ ಪಡೆಯಲು ಕ್ರಮ ಕೈಗೊಳ್ಳುವುದೇ ಮತ್ತು ಈ ಜಮೀನು ದುರ್ಬಳಕೆ ಮತ್ತು ಇಡೀ ಹಗರಣದ ಬಗ್ಗೆ ಉನ್ನತ ಮಟ್ಟದ ತನಿಖೆ ನಡೆಸಲು ಸರ್ಕಾರ ಸಿದ್ಧವಿದೆಯೇ? | ಹಂಚಿಕೆದಾರರು ಉದ್ದೇಶಿತ Golf Course ಮತ್ತು Golf Club ನಿರ್ಮಿಸಿ ಯೋಜನೆ ಅನುಷ್ಠಾನಗೊಳಿಸಿರುವುದರಿಂದ ಮಂಡಳಿಯ ನಿಯಮಗಳನ್ವಯ ಶುದ್ಧ ಕ್ರಯಪತ್ರ ನೆರವೇರಿಸಲಾಗಿರುತ್ತದೆ.<br><br>ಅಲ್ಲದೇ, ಕಂಪನಿಯವರು ಶುದ್ಧ ಕ್ರಯ ಪತ್ರ ನೆರವೇರಿಸಿದ ನಂತರವು Golf Course ಮತ್ತು Golf Club ಚಟುವಟಿಕೆ ಹೊರತು ಬೇರೆ ಯಾವುದೇ ಚಟುವಟಿಕೆ ನಡೆಸುವುದಿಲ್ಲ ಎಂದು Undertaking ಸಲ್ಲಿಸಿರುವುದರಿಂದ ಜಮೀನು ಹಿಂಪಡೆಯುವ ಪ್ರಶ್ನೆ ಉದ್ಭವಿಸುವುದಿಲ್ಲ. |

**ಸಂಖ್ಯೆ: ಸಿಐ 210 ಐಎಪಿ 2026**

**(ಎಂ.ಬಿ. ಪಾಟೀಲ)**
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ ಸಚಿವರು.